**ಅ. ದಾ. ಸಂ. : 269 / 2010**

**ಪಿ.ಡಬ್ಲ್ಯೂ : 01**

**ದಿನಾಂಕ : 24-02-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- 2 ನೇ ಪ್ರತಿವಾದಿಯ ಪರ ಶ್ರೀ. ಸಿ.ಎಂ. ವಕೀಲರಿಂದ :-**

ದಿನಾಂಕ: 12-10-1998 ರಲ್ಲಿ ನನ್ನ ತಮ್ಮ, ನನ್ನ ತಂದೆ ಹಾಗೂ ನನ್ನ ನಡುವೆ ವಿಭಾಗ ಆಗಿರುತ್ತದೆ. ಸದರಿ ದಾಖಲಾತಿ ಹಾಜರು ಪಡಿಸಿದ್ದೇನೆ. ನಾನು ಹೇಳುವಂತೆ ನಾನು ಹಾಜರು ಪಡಿಸಿರುವ ದಾಖಲಾತಿಯಲ್ಲಿ ಸದರಿ ದಿನಾಂಕ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-07 ರಲ್ಲಿ 1988 ಇಸವಿ ಎಂದು ನಮೂದು ಆಗಿದ್ದು, ನಾನು 1998 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 2010 ರಲ್ಲಿ ಮರಣ ಹೊಂದಿರುತ್ತಾರೆ. ನಿಪಿ-07 ರಲ್ಲಿ ನನ್ನ ತಂದೆಯು ಸಹ ಪಕ್ಷಗಾರರು ಎಂದರೆ ಸರಿ. ನನ್ನೊಂದಿಗೆ 4 ಜನ ಸಹೋದರ ಮತ್ತು ಸಹೋದರಿ ಇರುತ್ತಾರೆ. ನಿಪಿ-07 ರಲ್ಲಿ ನನ್ನ ತಂದೆಗೂ ಭಾಗ ಬಂದಿರುವುದರಿಂದ ನನ್ನ ತಂಗಿಯರನ್ನು ಕೂಡ ಪಕ್ಷಗಾರರನ್ನಾಗಿ ಸೇರಿಸಬೇಕಿದ್ದು, ಅವರನ್ನು ಬಿಟ್ಟು ದಾವೆ ಹೂಡಿರುತ್ತೇನೆ ಎಂದರೆ ಸಾಕ್ಷಿ ಅವರು ಮದುವೆ ಆಗಿರುತ್ತಾರೆ ಎನ್ನುತ್ತಾರೆ.

2. ನನ್ನ ತಂದೆಯ ಜೀವತಾವಧಿಯಲ್ಲಿ ನನ್ನ ತಂಗಿಯರಿಗೂ ಇಬ್ಬರ ಮದುವೆಯಾಗಿತ್ತು ಎಂದರೆ ಸರಿ. ಸದರಿಯವರ ಜೀವತಾವಧಿಯಲ್ಲಿ ಅವರ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರ ಜೀವತಾವಧಿಯಲ್ಲಿಯೇ ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿಯವರಿಗೆ ಪ್ರತಿವಾದಿ 1 ರವರು ಮಾರಾಟ ಮಾಡಿರುವ ವಿಚಾರ ಗೊತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳಿದ್ದರು ಎನ್ನುತ್ತಾರೆ. 2010 ರ ಅವಧಿಯಲ್ಲಿ ನನ್ನ ತಂದೆಯು ನಮ್ಮ ಮನೆಗೆ ಬಂದಾಗ ಹೇಳಿರುತ್ತಾರೆ. ಮಾರಾಟ ಮಾಡುವ ಸಂದರ್ಭದಲ್ಲಿಯೇ ನನಗೂ ಮತ್ತು ನನ್ನ ತಂದೆಗೂ ಮಾರಾಟದ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ದಾವ ಸ್ವತ್ತನ್ನು ಖರೀದಿಸಿದ ನಂತರ ಜಮೀನಿನಲ್ಲಿ ಬೋರ್ ತೆಗೆಸಿರುತ್ತಾರೆಂದರೆ ಸರಿ. ಸುಮಾರು 20 ವರ್ಷಗಳ ಹಿಂದೆಯೇ ಮಾವಿನ ಸಸಿ ನೆಟ್ಟಿದ್ದಾರೆ ಎಂದರೆ ಸಾಕ್ಷಿ ಇರಬಹುದು. ಸುಮಾರು 7-8

**ಅ. ದಾ. ಸಂ. : 269 / 2010**
**ಪಿ.ಡಬ್ಲ್ಯೂ : 01**

ವರ್ಷಗಳಿಂದ ಈಚೆಗೆ ತೆಂಗಿನ ಸಸಿಗಳನ್ನು ನೆಟ್ಟಿದ್ದಾರೆ ಎಂದರೆ ಸಾಕ್ಷಿ ಇರಬಹುದು. ದಾವ ಸ್ವತ್ತಿನ ಅಕ್ಕಪಕ್ಕ ನನ್ನ ಭಾಗದ ಸ್ವತ್ತು ಯಾವುದು ಇರುವುದಿಲ್ಲ. ನಿಪಿ-07 ರ ಪಾರಿಕತ್ ನಲ್ಲಿ ಪಾರೀಕತ್ ಆದ ನಂತರ ಅವರವರ ಸಾಲಕ್ಕೆ ಅವರೇ ಜವಾಬ್ದಾರರು ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ.

3. ಸರ್ವೆ ನಂಬರ್-41/2 ರಲ್ಲಿ ನನಗೆ ಮತ್ತು ಪ್ರತಿವಾದಿ 1 ರವರಿಗೆ ಭಾಗಾಂಶ ಬಂದಿದೆ ಎಂದರೆ ಸರಿ. ಸದರಿಯಲ್ಲಿ ನನಗೆ 2 ಎಕರೆ 17 ಗುಂಟೆ ಜಮೀನು ಹಾಗೂ ಪ್ರತಿವಾದಿ 1 ರವರಿಗೆ 1 ಎಕರೆ 25 ಗುಂಟೆ ಜಮೀನು ಬಂದಿದೆ ಎಂದರೆ ಸರಿ. ಸದರಿ ಎರಡು ಜಮೀನುಗಳು ಲಗತ್ತಾಗಿದೆ ಎಂದರೆ ಸರಿ. ಸದರಿ ಪ್ರತಿವಾದಿ 1 ರವರ ಭಾಗಕ್ಕೆ ಬಂದಿದ್ದ ಜಮೀನನ್ನು ಖರೀದಿಸಲು ನಾನು ಕೇಳಿದ್ದು, ಅವರು ಒಪ್ಪದ ಕಾರಣ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ಖರೀದಿಸಿರುವ ವಿಚಾರ ನನಗೆ ಗೊತ್ತಿದ್ದರು ಕೂಡ ಪ್ರತಿವಾದಿ 1 ರವರ ಮೇಲಿನ ದ್ವೇಷಕ್ಕೆ ಪ್ರತಿವಾದಿ 1 ಮತ್ತು 2 ರವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**